# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 31(81) |
| ಮಾನ್ಯ ಸದಸ್ಯರ ಹೆಸರು: | ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು: | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |
| ಉತ್ತರಿಸಬೇಕಾದ ದಿನಾಂಕ: | 09.12.2024. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಸರ್ಕಾರಿ ಶಾಲೆಗಳಲ್ಲಿ ಅಗತ್ಯವಾಗಿ ಬೇಕಾಗಿರುವ ಕೊಠಡಿ, ಪೀಠೋಪಕರಣಗಳು ಹಾಗೂ ಶಿಕ್ಷಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ತೆಗೆದುಕೊಂಡ ಕ್ರಮವೇನು; | ಹೌದು<br><br>ರಾಜ್ಯದಲ್ಲಿರುವ ಸರ್ಕಾರಿ ಶಾಲೆಗಳಲ್ಲಿ ಅಗತ್ಯವಾಗಿ ಬೇಕಾಗಿರುವ ಕೊಠಡಿ, ಪೀಠೋಪಕರಣಗಳು ಕೊರತೆ ಸಂಬಂಧದಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>**ಪೀಠೋಪಕರಣ:**<br>2022-23ನೇ ಸಾಲಿಗೆ ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಪೀಠೋಪಕರಣ ಒದಗಿಸಲು ಒಟ್ಟು ರೂ:70.00 ಕೋಟಿ ಅನುದಾನವನ್ನು ಬಿಡುಗಡೆಗೊಳಿಸಲಾಗಿದ್ದು ಖರೀದಿ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.<br><br>**ಕೊಠಡಿ:**<br>2021-22ನೇ ಸಾಲಿನಲ್ಲಿ ಅಮೃತ ಶಾಲಾ ಸೌಲಭ್ಯ ಯೋಜನೆ ಅಡಿಯಲ್ಲಿ ಆಯ್ದ 750 ಸರ್ಕಾರಿ ಶಾಲೆಗಳಿಗೆ ಸುಸಜ್ಜಿತ ಕಟ್ಟಡ, ಪ್ರಯೋಗಾಲಯ, ಗ್ರಂಥಾಲಯ, ಶೌಚಾಲಯ ಇತ್ಯಾದಿ ಸಮಗ್ರ ಸೌಲಭ್ಯ ಒದಗಿಸಲು ತಲಾ ರೂ.10.00 ಲಕ್ಷಗಳಂತೆ ಒಟ್ಟು ರೂ.7500.00 ಲಕ್ಷಗಳನ್ನು ಮಂಜೂರು ಮಾಡಿ ಬಿಡುಗಡೆ ಮಾಡಲಾಗಿದೆ.<br><br>2022-23ನೇ ಸಾಲಿನಲ್ಲಿ ವಿವೇಕ ಶಾಲಾ ಕೊಠಡಿ ನಿರ್ಮಾಣ ಯೋಜನೆಯಡಿ ಸರ್ಕಾರಿ ಶಾಲೆಗಳಲ್ಲಿ ಒಟ್ಟು 6601 ಕೊಠಡಿಗಳನ್ನು ನಿರ್ಮಿಸಲು ರೂ. 94393.90 ಲಕ್ಷಗಳು ಹಾಗೂ 2022-23ನೇ ಸಾಲಿನಲ್ಲಿ ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ 710 ಕಾಮಗಾರಿಗಳಿಗೆ ಒಟ್ಟು ರೂ. 8808.00 ಲಕ್ಷಗಳು ಮಂಜೂರಾಗಿರುತ್ತದೆ.<br><br>ಸದರಿ ಯೋಜನೆಯಡಿ 2022-23 ರಿಂದ 2024-25ನೇ ಸಾಲಿನವರೆಗೆ ಮಂಜೂರಾದ 7311 ಕಾಮಗಾರಿಗಳ ಪೈಕಿ ಅಕ್ಟೋಬರ್ ಅಂತ್ಯಕ್ಕೆ ಒಟ್ಟು 6146 ಕಾಮಗಾರಿಗಳು ಪೂರ್ಣಗೊಂಡಿದ್ದು, 1133 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ ಮತ್ತು 32 ಕಾಮಗಾರಿಗಳು ಪ್ರಾರಂಭವಾಗದ ಕಾರಣ ಅಧ್ಯರ್ಪಿಸಲು ಕ್ರಮವಹಿಸಲಾಗಿದ್ದು, ವಿವರಗಳು ಈ ಕೆಳಗಿನಂತಿದೆ:- |

| ಕ್ರ. ಸಂ | ವರ್ಷ | ಯೋಜನೆ | ಮಂಜೂರಾದ ಶಾಲೆಗಳು | ಮಂಜೂರಾದ ಕಾಮಗಾರಿಗಳ ಸಂಖ್ಯೆ | ಮಂಜೂರಾದ ಅನುದಾನ | ಬಿಡುಗಡೆ ಮಾಡಲಾದ ಅನುದಾನ |
|---|---|---|---|---|---|---|
| 1 | 2021-22 | ಅಮೃತ ಶಾಲಾ ಮಹೋತ್ಸವ | 750 | 750 | 7500.00 | 7500.00 |
| 2 | 2022-23 | ವಿವೇಕ | 4785 | 6601 | 94393.90 | 46901.84 |
| 3 | 2023-24 | ವಿವೇಕ | | | | 16960.61 |
| 4 | 2024-25 | ವಿವೇಕ | | | | 10702.62 |
| 5 | 2023-24 | CM Grants | 547 | 710 | 8808.00 | 4301.26 |
| 6 | 2024-25 | CM Grants | | | | 4406.74 |
| ಒಟ್ಟು | | | 6082 | 8061 | 110701.90 | 90773.07 |

**ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ ಶಿಕ್ಷಕರ ಕೊರತೆ ಸಂಬಂಧ:-**

ಸರ್ಕಾರದ ಆದೇಶ ಸಂಖ್ಯೆ: ಇಪಿ 230 ಪಿಬಿಎಸ್ 2024 ದಿನಾಂಕ:07.10.2024 ರನ್ವಯ ಕಲ್ಯಾಣ ಕರ್ನಾಟಕ ಪ್ರದೇಶದ 07 ಜಿಲ್ಲೆಗಳಲ್ಲಿ ಖಾಲಿಯಿರುವ ಪ್ರಾಥಮಿಕ ಶಾಲೆಗಳ 4882 ಹಾಗೂ ಪ್ರೌಢಶಾಲೆಗಳ 385 ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಲಾಗಿರುತ್ತದೆ.

ಆದರೆ, ಸುತ್ತೋಲೆ ಸಂಖ್ಯೆ: ಸಿಆಸುಇ 388 ಸೇನೆನಿ 2024, ದಿನಾಂಕ: 25.11.2024 ರಲ್ಲಿ ದಿನಾಂಕ:28.10.2024 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ರಾಜ್ಯ ಸಿವಿಲ್ ಸೇವೆಗಳಲ್ಲಿನ ಮೀಸಲಾತಿ ಅನ್ವಯವಾಗುವ ವೃಂದಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಹೊಸದಾಗಿ ಯಾವುದೇ ಅಧಿಸೂಚನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೂ ಹೊರಡಿಸಬಾರದೆಂದು ಸೂಚಿಸಲಾಗಿರುತ್ತದೆ.

ಪ್ರಸ್ತುತ, ರಾಜ್ಯದ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಖಾಲಿಯಿರುವ ಶಿಕ್ಷಕರ ಹುದ್ದೆಗಳಿಗೆ ಎದುರಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಖಾಯಂ ಹುದ್ದೆ ಭರ್ತಿ ಆಗುವವರೆಗೂ ಅಥವಾ ಶೈಕ್ಷಣಿಕ ಸಾಲಿನ ಅಂತ್ಯದವರೆಗೂ ತಾತ್ಕಾಲಿಕವಾಗಿ ಅತಿಥಿ ಶಿಕ್ಷಕರನ್ನು ನೇಮಕಮಾಡಿಕೊಳ್ಳುವ ಮೂಲಕ ಶಿಕ್ಷಕರ ಕೊರತೆಯನ್ನು ನೀಗಿಸಲಾಗಿದೆ.

| | | |
|---|---|---|
| ಆ) | ರಾಜ್ಯದಲ್ಲಿರುವ ಒಟ್ಟು ಸರ್ಕಾರಿ ಶಾಲೆಗಳ ಸಂಖ್ಯೆಯೆಷ್ಟು ಇದರಲ್ಲಿ | **ರಾಜ್ಯದಲ್ಲಿನ ಸರ್ಕಾರಿ ಪ್ರಾಥಮಿಕ ಶಾಲೆಗಳ ಒಟ್ಟು ಸಂಖ್ಯೆ:41589** |

| | | |
|---|---|---|
| | 10ಕ್ಕಿಂತ ಕಡಿಮೆ ಮಕ್ಕಳಿರುವ ಸರಾಸರಿ ಶಾಲೆಗಳ ಸಂಖ್ಯೆಯೆಷ್ಟು:<br>ಏಕೋಪಾಧ್ಯಾಯ ಸರ್ಕಾರಿ ಶಾಲೆಗಳ ಸಂಖ್ಯೆಯೆಷ್ಟು: | 10 ಕ್ಕಿಂತ ಕಡಿಮೆ ದಾಖಲಾತಿ ಇರುವ ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆ:**4264**<br><br>**ರಾಜ್ಯದಲ್ಲಿನ ಸರ್ಕಾರಿ ಪ್ರೌಢಶಾಲೆಗಳ ಒಟ್ಟು ಸಂಖ್ಯೆ:- 4871.**<br><br>10ಕ್ಕಿಂತ ಕಡಿಮೆ ದಾಖಲಾತಿ ಇರುವ ಸರ್ಕಾರಿ ಪ್ರೌಢಶಾಲೆಗಳ ಸಂಖ್ಯೆ: **01**<br><br>**ಏಕೋಪಾಧ್ಯಾಯ ಸರ್ಕಾರಿ ಶಾಲೆಗಳ ಸಂಖ್ಯೆ:**<br>ರಾಜ್ಯದಲ್ಲಿ ಒಟ್ಟು 5412 ಸರ್ಕಾರಿ ಪ್ರಾಥಮಿಕ ಶಾಲೆಗಳು ಏಕೋಪಾಧ್ಯಾಯ ಶಾಲೆಗಳಾಗಿರುತ್ತವೆ. |
| ಇ) | ಪ್ರತಿ ವರ್ಷವೂ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕ್ಷೀಣಿಸುತ್ತಿರುವುದರಿಂದ ಸರ್ಕಾರಿ ಶಾಲೆಗಳನ್ನು ಮುಚ್ಚುವ ಪರಿಸ್ಥಿತಿ ಎದುರಾಗಿದೆಯೇ: ಹಾಗಿದ್ದಲ್ಲಿ, ಕಳೆದ ಐದು ವರ್ಷಗಳಿಂದ ಎಷ್ಟು ಸರ್ಕಾರಿ ಶಾಲೆಗಳನ್ನು ಮುಚ್ಚಲಾಗಿದೆ: | ರಾಜ್ಯದಲ್ಲಿ ಯಾವುದೇ ಸರ್ಕಾರಿ ಪ್ರಾಥಮಿಕ ಶಾಲೆ ಅಥವಾ ಸರ್ಕಾರಿ ಪ್ರೌಢಶಾಲೆಗಳನ್ನು ಶಾಶ್ವತವಾಗಿ ಮುಚ್ಚಿರುವುದಿಲ್ಲ. ಒಂದು ವೇಳೆ ಮಕ್ಕಳ ದಾಖಲಾತಿ ಶೂನ್ಯವಾದಲ್ಲಿ ತಾತ್ಕಾಲಿಕವಾಗಿ ಆ ಶಾಲೆಯನ್ನು ಸ್ಥಗಿತಗೊಳಿಸಿ ಭವಿಷ್ಯದಲ್ಲಿ ಮಕ್ಕಳು ದಾಖಲಾದಲ್ಲಿ ಪುನಃ ಶಾಲೆಯನ್ನು ಪ್ರಾರಂಭಿಸಲಾಗುವುದು. |
| ಈ) | ಕಳೆದ ಐದು ವರ್ಷಗಳಲ್ಲಿ ಎಷ್ಟು ಖಾಸಗಿ ಶಾಲೆಗಳ ಪ್ರಾರಂಭಕ್ಕೆ ಅನುಮತಿ ನೀಡಲಾಗಿದೆ ಮತ್ತು ಎಷ್ಟು ಖಾಸಗಿ ಶಾಲೆಗಳನ್ನು ಮುಚ್ಚಲಾಗಿದೆ: (ಜಿಲ್ಲಾವಾರು ವಿವರ ನೀಡುವುದು) | • ಕಳೆದ ಐದು ವರ್ಷದಲ್ಲಿ ಒಟ್ಟು 2905 ಖಾಸಗಿ ಶಾಲೆಗಳ ಪ್ರಾರಂಭಕ್ಕೆ ಅನುಮತಿ ನೀಡಲಾಗಿದೆ.<br>• ಒಟ್ಟು 762 ಖಾಸಗಿ ಶಾಲೆಗಳನ್ನು ಮುಚ್ಚಲಾಗಿದ್ದು, ಜಿಲ್ಲಾವಾರು ವಿವರಗಳನ್ನು **ಅನುಬಂಧದಲ್ಲಿ** ಒದಗಿಸಿದೆ. |
| ಉ) | ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಕಡಿಮೆ ಆಗಲು ಕಾರಣ ತಿಳಿದುಕೊಳ್ಳಲು ಯಾವುದಾದರೂ ಸಮಿತಿಯನ್ನು ರಚಿಸಲಾಗಿದೆಯೇ? (ವಿವರಗಳನ್ನು ಒದಗಿಸುವುದು). | ಯಾವುದೇ ಸಮಿತಿಯನ್ನು ರಚಿಸಲಾಗಿರುವುದಿಲ್ಲ. |

**ಇಪಿ 122 ಪಿಎಂಎ 2024**

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

31(81)

ಅನುಬಂಧ

| ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು | | | | | | | |
|---|---|---|---|---|---|---|---|
| ಮಾನ್ಯ ವಿಧಾನ ಪರಷತ್ತಿನ ಸದಸ್ಯರಾದ ಶ್ರೀ ಗೋವಿಂದ ರಾಜು(ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ರಹಿತ ಗುರುತಿನ ಪ್ರಶ್ನೆ ಸಂಖ್ಯೆ:81ಕ್ಕೆ ಉತ್ತರ. | | | | | | | |
| ಕ್ರ.ಸಂ | ಜಿಲ್ಲೆಯ ಹೆಸರು | 2019-20ನೇ ಸಾಲಿನಿಂದ 2023-24ನೇ ಸಾಲಿನವರೆಗೆ ಅನುಮತಿ ನೀಡಿರುವ ಖಾಸಗಿ ಶಾಲೆಗಳ ಸಂಖ್ಯೆ | | | 2019-20ನೇ ಸಾಲಿನಿಂದ 2023-24ನೇ ಸಾಲಿನವರೆಗೆ ಮುಚ್ಚಲಾಗಿರುವ ಶಾಲೆಗಳ ಸಂಖ್ಯೆ | | |
| | | ಹೊಸ ಶಾಲೆ ನೋಂದಣಿ | ಉನ್ನತೀಕರಿಸಿದ ತರಗತಿಗಳು (6-8ನೇ / 9 ಮತ್ತು 10ನೇ ತರಗತಿ) | ಒಟ್ಟು | ಅನುದಾನ | ಅನುದಾನ ರಹಿತ | ಒಟ್ಟು |
| 1 | ಬೆಳಗಾವಿ | 33 | 54 | 87 | 0 | 2 | 2 |
| 2 | ಬಾಗಲಕೋಟೆ | 65 | 96 | 161 | 0 | 0 | 0 |
| 3 | ವಿಜಯಪುರ | 119 | 173 | 292 | 3 | 2 | 5 |
| 4 | ಕಲಬುರ್ಗಿ | 47 | 30 | 77 | 6 | 128 | 134 |
| 5 | ಬೀದರ್ | 47 | 92 | 139 | 8 | 16 | 24 |
| 6 | ರಾಯಚೂರು | 34 | 37 | 71 | 0 | 0 | 0 |
| 7 | ಕೊಪ್ಪಳ | 31 | 16 | 47 | 0 | 0 | 0 |
| 8 | ಗದಗ | 15 | 30 | 45 | 0 | 10 | 10 |
| 9 | ಧಾರವಾಡ | 47 | 58 | 105 | 6 | 17 | 23 |
| 10 | ಕಾರವಾರ (ಉತ್ತರ ಕನ್ನಡ) | 10 | 25 | 35 | 4 | 5 | 9 |
| 11 | ಹಾವೇರಿ | 18 | 69 | 87 | 2 | 22 | 24 |
| 12 | ಬಳ್ಳಾರಿ | 50 | 38 | 88 | 0 | 4 | 4 |
| 13 | ಚಿತ್ರದುರ್ಗ | 33 | 98 | 131 | 3 | 14 | 17 |
| 14 | ದಾವಣಗೆರೆ | 40 | 34 | 74 | 10 | 10 | 20 |
| 15 | ಶಿವಮೊಗ್ಗ | 30 | 46 | 76 | 12 | 13 | 25 |
| 16 | ಉಡುಪಿ | 12 | 30 | 42 | 18 | 10 | 28 |
| 17 | ಚಿಕ್ಕಮಗಳೂರು | 12 | 22 | 34 | 5 | 13 | 18 |
| 18 | ತುಮಕೂರು | 9 | 11 | 20 | 17 | 6 | 23 |
| 19 | ಕೋಲಾರ್ | 40 | 43 | 83 | 0 | 11 | 11 |
| 20 | ಬೆಂಗಳೂರು ದಕ್ಷಿಣ | 174 | 81 | 255 | 13 | 72 | 85 |
| 21 | ಬೆಂಗಳೂರು ಗ್ರಾಮೀಣ | 41 | 24 | 65 | 1 | 10 | 11 |
| 22 | ಮಂಡ್ಯ | 42 | 58 | 100 | 3 | 38 | 41 |
| 23 | ಹಾಸನ | 44 | 39 | 83 | 16 | 22 | 38 |
| 24 | ಮಂಗಳೂರು (ದಕ್ಷಿಣ ಕನ್ನಡ) | 31 | 48 | 79 | 42 | 27 | 69 |
| 25 | ಮಡಿಕೇರಿ (ಕೊಡಗು) | 18 | 27 | 45 | 4 | 0 | 4 |
| 26 | ಮೈಸೂರು | 30 | 23 | 53 | 1 | 2 | 3 |
| 27 | ಚಾಮರಾಜನಗರ | 13 | 45 | 58 | 1 | 0 | 1 |
| 28 | ಬೆಂಗಳೂರು ಉತ್ತರ | 63 | 12 | 75 | 21 | 35 | 56 |
| 29 | ಚಿಕ್ಕಬಳ್ಳಾಪುರ | 36 | 36 | 72 | 4 | 22 | 26 |
| 30 | ಚಿಕ್ಕೋಡಿ | 58 | 116 | 174 | 2 | 16 | 18 |
| 31 | ಮಧುಗಿರಿ | 14 | 7 | 21 | 1 | 8 | 9 |
| 32 | ರಾಮನಗರ | 17 | 19 | 36 | 10 | 10 | 20 |
| 33 | ಯಾದಗಿರಿ | 40 | 18 | 58 | 0 | 0 | 0 |
| 34 | ಸಿರಸಿ | 20 | 0 | 20 | 2 | 0 | 2 |
| 35 | ವಿಜಯನಗರ | 6 | 11 | 17 | 0 | 2 | 2 |
| ಒಟ್ಟು | | **1339** | **1566** | **2905** | **215** | **547** | **762** |

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ),
ಶಾ.ಶಿ.ಇ, ಆಯುಕ್ತರ ಕಛೇರಿ,
ಬೆಂಗಳೂರು